ದಿನಾಂಕಃ 20.03.2023 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 12.06.2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ **1** ರಿಂದ **3** ನೇ ಆರೋಪಿತರ ಪರವಾಗಿಃ

3. ಯಾವುದೇ ವಾಹನವನ್ನು ಕಂಪೆನಿಗೆ ಕಳುಹಿಸುವ ಸಮಯದಲ್ಲಿ ಆ ಬಗ್ಗೆ ಕರಾರನ್ನು ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಮೇನ್ ವೆಂಡರ್ ಮೂಲಕ ನಮ್ಮ ಗಾಡಿಯನ್ನು ಡೆಲ್ ಕಂಪೆನಿಗೆ ಅಟ್ಯಾಚ್ ಮಾಡಿದ್ದೆವು ಸದರಿ ವಾಹನವು 5 ಅಥವಾ 6 ನೇ ತಾರೀಖಿನಂದು ಕೆಲಸಕ್ಕೆ ಹೋಗಬೇಕಾಗಿತ್ತು ಎನ್ನುತ್ತಾರೆ. ಸದರಿ ಮೇನ್ ವೆಂಡರ್ ಮತ್ತು ನಿಮ್ಮ ನಡುವೆ ಯಾವುದಾದರೂ ಕರಾರು ಆಗಿತ್ತೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಕರಾರು ಮಾಡಿಕೊಳ್ಳುವಷ್ಟರಲ್ಲಿ ಈ ಘಟನೆ ನಡೆದಿದೆ ಎನ್ನುತ್ತಾರೆ.

4. ಡೆಲ್ ಕಂಪೆನಿಗೆ ನಿಮ್ಮ ವಾಹನವನ್ನು ಮೇನ್ ವೆಂಡರ್ ಮೂಲಕ ಅಟ್ಯಾಚ್ ಮಾಡಿದ್ದಾಗಿ ಮತ್ತು ಸದರಿ ವಾಹನ 5 ಅಥವಾ 6 ನೇ ತಾರೀಖಿನಂದು ಕೆಲಸಕ್ಕೆ ಹೋಗಬೇಕಾಗಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ವಾಹನದಲ್ಲಿ ಜಿ ಪಿ ಎಸ್ ಅನ್ನು ಅಳವಡಿಸಿರಲಿಲ್ಲ. ಸುಧಾಕರ್ ರವರನ್ನು ನಿಮ್ಮ ವಾಹನದ ಚಾಲಕನನ್ನಾಗಿ ನೇಮಿಸಿಕೊಂಡ ಬಗ್ಗೆ ನೀವು ಯಾವುದಾದರೂ ದಾಖಲೆಯನ್ನು ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ಬಳಿ ಇರುವುದು ಒಂದೇ ವಾಹನ, ನಾನು ಯಾವುದೇ ಕಂಪೆನಿಯನ್ನು ನಡೆಸುತ್ತಿಲ್ಲ ಮೇಲಾಗಿ ಸುಧಾಕರನನ್ನು ಆಗ ತಾನೇ ಹೊಸದಾಗಿ

ನೇಮಿಸಿಕೊಡಿದ್ದೆವು ಹಾಗಾಗಿ ಯಾವುದೇ ದಾಖಲೆಯನ್ನು ಮಾಡಿಕೊಂಡಿಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಸುಧಾಕರನನ್ನು ನಿಮ್ಮ ವಾಹನದ ಚಾಲಕನನ್ನಾಗಿ ನೇಮಿಸಿಕೊಂಡಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

5. ಯಾವುದೇ ವ್ಯಕ್ತಿಯನ್ನು ವಾಹನದ ಚಾಲಕನನ್ನು ಕಂಪೆನಿಗೆ ಅಟ್ಯಾಚ್ ಮಾಡುವ ಮೊದಲು ನೀವು ಆತನ ಹೆಸರು ಮತ್ತು ವಿಳಾಸದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸುತ್ತೀರಿ ಎಂದರೆ ಸಾಕ್ಷಿ ಆ ಬಗ್ಗೆ ಕಂಪೆನಿಯವರೇ ಪರಿಶೀಲಿಸುತ್ತಾರೆ ಮತ್ತು ವಾಹನಕ್ಕೆ ಜಿ ಪಿ ಎಸ್ ಅನ್ನೂ ಸಹ ಕಂಪೆನಿಯವರೇ ಅಳವಡಿಸುತ್ತಾರೆ ಎನ್ನುತ್ತಾರೆ. ಡೆಲ್ ಕಂಪೆನಿಗೆ ನಿಮ್ಮ ವಾಹನವನ್ನು ಬಿಡುವ ಬಗ್ಗೆ ಯಾವಾಗ ಮಾತುಕತೆಯಾಗಿತ್ತು ಎಂದರೆ ಸಾಕ್ಷಿ 1 ನೇ ತಾರೀಖಿನಂದು ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ